ಶ್ರೀ ಸಿ.ಭೈರೇಗೌಡ: ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ. ನಾನು ಕೆಲವು ವಿಚಾರಗಳಲ್ಲಿ ಒಂದೆರಡನ್ನು ಮಾತ್ರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಇದರ ಮೇಲೆ.....

ಶ್ರೀ ಸಿ.ಭೈರೇಗೌಡ: ನೀವು ಬೇಡ ಎಂದರೆ ನಾನು ಕುಳಿತುಕೊಂಡು ಬಿಡುತ್ತೇನೆ.

ಅಧ್ಯಕ್ಷರು: ಆ ಪ್ರಶ್ನೆ ಕೇಳಬೇಡಿ.

ಶ್ರೀ ಸಿ.ಭೈರೇಗೌಡ: ಬೇಡ ಎಂದರೆ ಕುಳಿತುಕೊಂಡು ಬಿಡುತ್ತೇನೆ. ಮಾತನಾಡುವುದೇ ಬೇಡ ಬಿಡಿ.

(ಈ ಹಂತದಲ್ಲಿ ಮಾನ್ಯ ಭೈರೇಗೌಡರು ಸಭಾತ್ಯಾಗ ಮಾಡಿ ಹೊರಗೆ ಹೋದರು.)

ಅಧ್ಯಕ್ಷರು: ಬನ್ನಿ ಮಾತನಾಡಿ, ಭೈರೇಗೌಡ್ರೇ, ಅವರನ್ನು ಕರೆಯಿರಿ, ಬಂದು ಮಾತನಾಡಲಿ. ನಾನು ಮಾತನಾಡಿ ಎಂದು ಹೇಳಿದೆನಲ್ಲಾ.

ಶ್ರೀ ಖಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸವಿಸ್ತಾರವಾಗಿ ವ್ಯಂಗ್ಯವನ್ನು ಬೆರಸದೆ ಹಾಸ್ಯವಾಗಿ ನಾವು ಕೇಳಿರತಕ್ಕ ಬಹುತೇಕ ಎಲ್ಲಾ ವಿಚಾರಗಳನ್ನು ಪರಿಶೀಲನೆ ಮಾಡತಕ್ಕ ಭರವಸೆಯನ್ನು ಕೊಟ್ಟಿದ್ದಾರೆ. ಮಾನ್ಯ ಭೈರೇಗೌಡರು ಹಿರಿಯ ಸದಸ್ಯರು ಇದ್ದಾರೆ, ಈ ಅಧಿವೇಶನದಲ್ಲಿ ಅವರು ಮಾತನಾಡಲಿಕ್ಕೆ ನಮ್ಮ ಒಂದು ಸಮಯದ ಅಭಾವದಿಂದಾಗಿ ಮಾತನಾಡಲಿಕ್ಕಾಗಿಲ್ಲ. ಅವರು ಕೆಲವು ಕ್ಲಾರಿಫಿಕೇಷನನ್ನು ಕೇಳಬೇಕು ಎಂದು ಇದ್ದಾರೆ. ಅವರಿಗೆ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಅವರಿಗೆ ಮಾತನಾಡಿ ಎಂದು ಹೇಳಿದ್ದೇನಲ್ಲಾ.

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಸಚಿವರು): ಮಾನ್ಯ ಅಧ್ಯಕ್ಷರ ಮೇಲೆ ಆ ರೀತಿ ಮಾಡಿ ಅವರು ಹೊರಗೆ ಹೋಗಿದ್ದು ಸರಿಯಲ್ಲ.

ಅಧ್ಯಕ್ಷರು: ಅವರನ್ನು ಕರೆಯಿರಿ, ಮಾತನಾಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಸಿಟ್ಟು ಮಾಡಿಕೊಳ್ಳತಕ್ಕ ಅವಶ್ಯಕತೆಯೇ ಇರಲಿಲ್ಲ. ಯಾರ ಮೇಲೆ ಸಿಟ್ಟು?

(ಗೊಂದಲ)

ಶ್ರೀ ಎಂ.ಚಂದ್ರಪ್ಪ: ಅವರು ಐದು ಸಾರಿ ಗೆದ್ದಿದ್ದಾರೆ. ಅವರು ಹಿರಿಯ ಸದಸ್ಯರು.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಭೈರೇಗೌಡರು ಸದನಕ್ಕೆ ಬಂದು ತಮ್ಮ ಸ್ಥಾನದಲ್ಲಿ ಕುಳಿತುಕೊಂಡರು)

ಅಧ್ಯಕ್ಷರು: ಗೌಡ್ರೇ ನೀವು ಮಾತನಾಡಿ.

ಶ್ರೀ ಸಿ.ಭೈರೇಗೌಡ: ಸ್ವಾಮಿ, ದಯವಿಟ್ಟು ಕ್ಷಮಿಸಿ. ನೀವು ಕೋಲಾರದವರು.

ಅಧ್ಯಕ್ಷರು: ಆ ವ್ಯಾಖ್ಯಾನವೆಲ್ಲಾ ಬೇಡಿ, ದಯವಿಟ್ಟು ತಾವು ಮಾತನಾಡಿ.

+ ಶ್ರೀ ಸಿ.ಭೈರೇಗೌಡ (ವೇಮಗಲ್): ನಾನು ಒಂದು ನಿಮಿಷ ಮಾತನಾಡುತ್ತೇನೆ. ನಾನು ಜಾಸ್ತಿ ಹೊತ್ತು ಮಾತನಾಡುವುದಿಲ್ಲ. ನಾವು ಹೇಳುವಷ್ಟರಲ್ಲಿ ನಾವು ಕೋಲಾರದವರು, ತಾವೂ ಕೋಲಾರದವರು, ಎಲ್ಲಾ ಕೋಲಾರದವರು. ಅದಕ್ಕೋಸ್ಕರ ಅದರಿಂದ ತಪ್ಪಿಸಿಕೊಳ್ಳಬೇಕೆಂದು ಹೇಳಿ ಸುಮಾರು ೨೫ ವರ್ಷಗಳಿಂದ ಈ ಸದನದಲ್ಲಿ ಕುಳಿತಿದ್ದೇನೆ. ಇದು ಮೊದಲನೇ ಸಾರಿ ಇಷ್ಟು ನೋವನ್ನು ಅನುಭವಿಸತಕ್ಕಂಥಾದ್ದು ಈ ಸದನದಲ್ಲಿ ಕುಳಿತು. ನನಗೂ ಕೂಡ ಇಲ್ಲಿ ಮಾತನಾಡತಕ್ಕ ಅಧಿಕಾರ ಇದೆ. ದಯವಿಟ್ಟು ಅವಕಾಶ ಕೊಡಿ. ತಾವು ಕೋಲಾರದವರು, ನಾನು ಕೋಲಾರದವನು, ಇನ್ನೂ ಒಂದು ಸಾರಿ ಏನು ಹೇಳುತ್ತಾರೆ ಎಂದರೆ, ಹಿಂದಿನ ಸಾರಿ ಹಿಂದೆ ಇದ್ದ ಅಧ್ಯಕ್ಷರೂ ಕೂಡ ಕೋಲಾರದವರೇ ಆಗಿದ್ದರು. ನೀವೆಲ್ಲಾ ಕೋಲಾರದವರು ಎಂದು ಹೇಳತಕ್ಕಂಥಾದ್ದೂ ಕೂಡ ಇಲ್ಲಿ ಸರ್ವೇಸಾಮಾನ್ಯವಾಗಿ ಕೇಳಿ ಬರತಕ್ಕಂಥ ಮಾತು. ಅದನ್ನು ನೋಡಿ ತಾವೇನು ಮಾಡುತ್ತೀರಿ, ನಾವು ಎದ್ದರೆ ನೀವು ಜಾಸ್ತಿ ಮಾತನಾಡುತ್ತೀರಿ ಎಂದು ನಿಮ್ಮ ಹತ್ತಿರ ಅನ್ನಿಸಿಕೊಳ್ಳಬಾರದು ನಾನು ಮಾತನಾಡುವುದಕ್ಕೆ ಇಷ್ಟಪಡಲಿಲ್ಲ. ಬಜೆಟ್ ಮೇಲೂ ಮಾತನಾಡಲಿಲ್ಲ. ಏಕೆಂದರೆ ಈ ಮಾತು ಬರುತ್ತದೆ, ಆ ರೀತಿ ಅನ್ನಿಸಿಕೊಳ್ಳಕೂಡದು ಎನ್ನುವ ಕಾರಣಕ್ಕೋಸ್ಕರ ಮಾತನಾಡಲಿಲ್ಲ ನಿಮಗೂ ಕೂಡ ಗೌರವ ಕೊಡಬೇಕೆಂದು ಹೇಳಿ. ಆದ್ದರಿಂದ ನಾನು ನನ್ನ ನೋವನ್ನು ನುಂಗಿಕೊಳ್ಳುವುದಕ್ಕೆ ಸಾಧ್ಯವಾಗದೆ ಹೊರಗೆ ಹೋದೆ. ನಿಮ್ಮ ಮೇಲೆ ದುರಾಭಿಪ್ರಾಯದಿಂದ ಖಂಡಿತಾ ನಾನು ಹೊರಗಡೆ ಹೋಗಲಿಲ್ಲ. ನನ್ನ ನೋವನ್ನು ನುಂಗಿಕೊಳ್ಳುವುದಕ್ಕೆ ಸಾಧ್ಯವಾಗದೇ ಹೊರಗಡೆ ಹೋದೆ. ಅದರಿಂದ ನಿಮಗೆ ಅಗೌರವ ತೋರಿಸಬೇಕೆಂದಾಗಲಿ ಖಂಡಿತಾ ನಾನು ಹೊರಗಡೆ ಹೋಗಲಿಲ್ಲ. ಅದನ್ನು ನಾನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.